ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ .ದ ನ್ಯಾ ದಂ ಗಳ ನ್ಯಾಯಾಲಯ ಹೊಸಪೇಟೆ

**cc NO. 2526-2019**

| | |
|---|---|
| ಸಾಕ್ಷಿ ಹೆಸರು - | ಮಲ್ಕಾ ಬೇಗಮ್ |
| ತಂದೆ / ಗಂಡನ ಹೆಸರು - | ಎಂ ಎ ವಲಿಸಾಬ್ |
| ವಯಸ್ಸು - | 49 ವರ್ಷಗಳು |
| ಉದ್ಯೋಗ - | ಗೃಹಿಣಿ |
| ವಾಸಸ್ಥಳ - | ಹೊಸಪೇಟೆ |

ದೋಷಾರೋಪಣ ಪೂರ್ವ ಸಾಕ್ಷಿ ವಿಚಾರಣೆ

ಸಾಕ್ಷಿಯನ್ನು ದಿನಾಂಕ 03-06-2021 ರಂದು ಪ್ರಾಮಾಣೀಕರಿಸಲಾಯಿತು.

2006 ರಲ್ಲಿ ಆರೋಪಿ ನಮ್ಮ ಮನಗೆಗೆ ಬಂದಿದ್ದ . ಆತ ಅನಂತಶಯನ ಗುಡಿಯ ಹತ್ತಿರ 21 ಇಂಟು 35 ಅಡಿ ನನ್ನ ಜಾಗ ಇರುತ್ತದೆ ಎಂದು ಹೇಳಿದ. ಸದರಿ ಸ್ವತ್ತಿನ ಸರ್ವೆ ನಂಬರ್ 115-3 ಅಸಿಸ್ ಮೆಂಟ್ ನಂಬರ್ 98 ಎಂದು ಹೇಳಿರುತ್ತಾನೆ . ಮತ್ತು ಸದರಿ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಗುರುಪಾದಪ್ಪನ ಹೋಟೆಲ್, ಉತ್ತರಕ್ಕೆ ರಸ್ತೆ ದಕ್ಷಿಣಕ್ಕೆ ಹೂಡಾ ಪ್ಲಾಟ್ ಇದೆ ಎಂದು ಹೇಳಿದ . ಸದರಿ ಸ್ವತ್ತು ನನ್ನ ಹೆಸರಿನಲ್ಲಿದ್ದು ಎಲ್ಲಾ ದಾಖಲೆಗಳು ನನ್ನ ಹೆಸರಿನಲ್ಲಿ ಎಲ್ಲವೂ ಕ್ಲಿಯರ್ ಇದೆ ಅದನ್ನು ನೀವು ಮಾರಾಟಕ್ಕೆ ತೆಗೆದುಕೊಳ್ಳಿ ಎಂದು ಹೇಳಿದ . ನನ್ನ ಮಾಲೀಕತ್ವಕ್ಕೆ ಯಾವುದೇ ತಕಾರಾರು ಇಲ್ಲಾ ಎಂದು ಹೇಳಿದ.

ದಿನಾಂಕ 14-11-2006 ರಂದು 56,000 ಮುಂಗಡ ಹಣ ಕೊಟ್ಟು ಕ್ರಯ ಪತ್ರ ಮಾಡಿಕೊಟ್ಟಿರುತ್ತಾನೆ . ನಂತರ ರಿಜಿಸ್ಟೇಶನ್ ಆದ ಮೇಲೆ 5,00,000 ಹಣವನ್ನು ಕಟ್ಟಡ ಕಟ್ಟಲು ಖರ್ಚು ಮಾಡಿರುತ್ತೇವೆ . ನಂತರ 2012 ರಲ್ಲಿ ಹೂಡಾ ಅವರು ಉತ್ತರ ದಿಕ್ಕಿಗೆ ಅತಿಕ್ರಮಣ ಮಾಡಿದ್ದೀರೀ ಎಂದು ನನಗೆ ನೋಟೀಸು ಕೊಟ್ಟಿದ್ದರು .ಅದಕ್ಕೆ ನಾನು ಯಾವುದೇ ಅತಿಕ್ರಮಣ ಮಾಡಿಲ್ಲ ಎಂದು ಉತ್ತರ ಕೊಟ್ಟಿದ್ದೆ . ನಂತರ 2013 ರಲ್ಲಿ ಮತ್ತೊಂದು ನೋಟೀಸ ಅವರು ಕೊಟ್ಟಿದ್ದರೂ ಹಾಗೂ ಹೂಡಾ ಅವರು ಕಟ್ಟಡ ವನ್ನು ಕೆಡವಲು ಬಂದಿದ್ದರು . ನಂತರ ನಾನು ಅವರ ವಿರುದ್ದ ಇದೇ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹಾಕಿರುತ್ತೇನೆ . ಆ

ದಾವೆಯಲ್ಲಿ ನ್ಯಾಯಾಲಯದಿಂದ ಸ್ವತ್ತನ್ನು ಅಳತೆ ಮಾಡಲು ಅಲ್ಲಿಗೆ ಬಂದಿದ್ದರು ಅಳತೆಯ ಕಾಲಕ್ಕೆ ಸದರಿ ಜಾಗ ಹೂಡಾ ಅವರಿಗೆ ಸೇರಿದೆ ಎಂದು ಗೊತ್ತಾಗಿರುತ್ತದೆ . ಆಗ ನನಿಗೆ ಆರೋಪಿ ಆತ ಸ್ವತ್ತಿನ ಮಾಲೀಕ ಅಲ್ಲಾ ಎಂದು ಅತನಿಗೆ ಗೊತ್ತಿದ್ದರೂ ಸಹ ಅದನ್ನು ನನಿಗೆ ಮಾರಾಟ ಮಾಡಿದ್ದಾನೆ ಎಂದು ಗೊತ್ತಾಗಿರುತ್ತದೆ . ಸದರಿ ಸರ್ವೆ ವರದಿಯ ಆಧಾರದ ಮೇಲೆ ನಾನು ಹಾಕಿದ ದಾವೆ ವಜಾ ಆಗಿರುತ್ತದೆ. ನಂತರ ನಾನು ಮೇಲ್ಮನವಿ ಸಲ್ಲಿಸಿದ್ದು ಅದೂ ಸಹ ಸರ್ವೆಯ ಆಧಾರದ ಮೇಲೆ ವಜಾ ಆಗಿರುತ್ತದೆ .

ನಂತರ ಆರೋಪಿ ನನಿಗೆ ಮೋಸ ಮಾಡಿರುವುದಾಗಿ ಗೊತ್ತಾಗಿ ನಾನು ಆತನಿಗೆ ವಕೀಲರ ಮೂಲಕ 2017 ರಲ್ಲಿ ನೋಟೀಸನ್ನು ಕೊಟ್ಟಿರುತ್ತೇನೆ . ಆ ನೋಟೀಸನ್ನು ಆತ ತಿರಸಕ್ಕಾರ ಮಾಡಿರುತ್ತಾನೆ . ಆದುದರಿಂದ ನಾನು ಆರೋಪಿಯ ವಿರುದ್ಧ ಈ ಕೇಸನ್ನು ಹಾಕಿರುತ್ತೇನೆ . ಆರೋಪಿಗೆ ಸದರಿ ಸ್ವತ್ತಿನ ಮಾಲೀಕ ತಾನು ಅಲ್ಲಾ ಎಂದು ಗೊತ್ತಿದ್ದರೂ ಹಸ ದಾಖಲೆಗಳನ್ನು ಸೃಷ್ಟಿ ಮಾಡಿ ನನಿಗೆ ನಂಬಿಸಿ ಮೋಸ ಮಾಡಿರುತ್ತಾನೆ .

ಆದ್ದರಿದ ಅತನ ವಿರುದ್ಧ ಸೂಕ್ತ ಕ್ರಮ ಕೈಗೊಂಡು ನನಿಗೆ ಪರಿಹಾರ ಕೊಡ ಬೇಕೆಂದು ಮತ್ತು ಆತನ ಕೃತ್ಯದಿಂದ ಕಟ್ಟಡ ಖರ್ಚು 5,00,000 ಹಣ 2,00,000 ಕೋರ್ಟ್ ಖರ್ಚಿನ ಹಣವನ್ನು ಪರಿಹಾರವಾಗಿ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ .

ಈ ಹಂತದಲ್ಲಿ ವಕೀಲರು ಮುಖ್ಯ ವಿಚಾರಣೆಗಾಗಿ ಸಮಯಾವಕಾಶವನ್ನು ಕೇಳಿದ್ದು ನ್ಯಾಯದಾನದ ದೃಷ್ಟಿಯಿಂದ ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಸಿ ಜೆ ಹೊಸಪೇಟೆ